ಸಾಕ್ಷಿಯನ್ನು ದಿಃ-27.11.2021 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

ಪಾಟೀಸವಾಲುಃ- 3 ನೇ ಪ್ರತಿವಾದಿ ಪರ ವಕೀಲರಿಂದ ಃ-

1. ನನ್ನ ತಂದೆ ದಾಳಿಂಬದ ಕುಳ್ಳೇಗೌಡನ ಮಾದೇಗೌಡ ಎಂದರೆ ಸರಿ. ನನ್ನ ತಂದೆ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎಂದರೆ ಸರಿ. ನನ್ನ ತಂದೆ ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಯಾದ ಚೌಡೇಗೌಡನಿಗೆ ದಿನಾಂಕ 26-06-1956 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಮಾರಾಟ ಮಾಡಿದ ನಂತರವೂ ಕ್ರಯದಾರರ ಹೆಸರಿಗೆ ಖಾತೆ ಬದಲಾವಣೆಯಾಗದೇ ತನ್ನ ತಂದೆಯ ಹೆಸರಿನಲ್ಲಿ ಮುಂದುವರೆಯುತ್ತಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2 ನೇ ವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿಯರು ನನ್ನ ಸಹೋದರಿ ಮತ್ತು ಸಹೋದರರು ಎಂದರೆ ಸರಿ. 3 ನೇ ಪ್ರತಿವಾಧಿಗೆ ಮೋಸ ಮಾಡುವ ಉದ್ದೇಶದಿಂದ ನಾವೆಲ್ಲರೂ ಸೇರಿಕೊಂಡು ದಿನಾಂಕ 22-10-2003 ರ ದಾನಪತ್ರ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 18-10-2007 ರಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಪುನಃ ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಚಿಕ್ಕಪ್ಪನ ಮಾತು ಕೇಳಿಕೊಂಡು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ-1 ಮತ್ತು 2 ರ ಚೆಕ್ಕುಬಂದಿಗೂ ಹಾಗೂ ವಾದ ಪತ್ರದ ಚೆಕ್ಕುಬಂದಿಗಳು ಬೇರೆ ಬೇರೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 26-06-1956 ರ ಕ್ರಯಪತ್ರದ ದಿನದಿಂದ ಚೌಡೇಗೌಡರ ಕುಟುಂಬದವರು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

2. ಚೌಡೇಗೌಡನಿಗೆ ಮೂರು ಜನ ಗಂಡು ಮಕ್ಕಳು ಎಂದರೆ ಸರಿ. ಚೌಡೇಗೌಡನ ಮೂರು ಜನ ಮಕ್ಕಳು ಮೌಖಿಕವಾಗಿ ವಿಭಾಗ ಮಾಡಿಕೊಂಡಾಗ ದಾವಾ ಆಸ್ತಿಯು 3 ನೇ ಪ್ರತಿವಾದಿಯ ತಂದೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಎರಡು ಛಾಯಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿ.ಡಿ-1 ಮತ್ತು 2 ಎಂದು ಗುರುತಿಸಲಾಯಿತು. ನಿ.ಡಿ-2 ರಲ್ಲಿ 3 ನೇ ಪ್ರತಿವಾದಿಯು ಕೊಳವೆ ಬಾವಿಯನ್ನು ಹಾಕಿಸಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಮೋಸದಿಂದ ಮಾಡಿಕೊಂಡಿರುತ್ತಾರೆ

ಎಂದು ನುಡಿಯುತ್ತಾರೆ. ನಾವು 3 ನೇ ಪ್ರತಿವಾದಿ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ನನಗೆ ದಾನ ಪತ್ರ ಬರೆದುಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 1956 ರಲ್ಲಿ ನನ್ನ ತಂದೆ ಹಾಗೂ ಚೌಡೇಗೌಡನ ಮಧ್ಯೆ ನಡೆದ ಕ್ರಯಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 26-06-1956 ರ ಕ್ರಯಪತ್ರದ ಅನುಗುಣವಾಗಿ ಪುನಃ 1 ಮತ್ತು 2 ನೇ ಪ್ರತಿವಾದಿಯರು ದಿನಾಂಕ 18-10-2007 ರಲ್ಲಿ 3 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ 3 ನೇ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದಾರೆ ಸಾಕ್ಷಿಯು ನಮಗೆ ಮೋಸ ಮಾಡಿ 3 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆಂದು ನುಡಿಯುತ್ತಾರೆ. ನಿ.ಪಿ-1 ಮತ್ತು 2 ರ ದಾನ ಪತ್ರಗಳ ದಿನಾಂಕದಂದು ಸಹ 3 ನೇ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದ ಎಂದರೆ ಸಾಕ್ಷಿಯು 3 ನೇ ಪ್ರತಿವಾದಿಯು ಮೋಸ ಮಾಡಿ ದಾವಾ ಆಸ್ತಿಯನ್ನು ಸ್ವಾಧೀನಪಡೆದುಕೊಂಡಿದ್ದ ಎಂದು ನುಡಿಯುತ್ತಾರೆ.

**3.** ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ 3 ನೇ ಪ್ರತಿವಾದಿಯ ಚಿಕ್ಕಪ್ಪ ಮಾದೇಗೌಡನ ಜಮೀನು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ನಮ್ಮ ಜಮೀನು, ದಾವಾ ಆಸ್ತಿಯ ಪಶ್ಚಿಮಕ್ಕೆ ಯಾರ ಜಮೀನು ಬರುತ್ತದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ತಂಬೇಗೌಡರ ಜಮೀನು, ದಾವಾ ಆಸ್ತಿಯ ದಕ್ಷಿಣಕ್ಕೆ ಯಾರ ಆಸ್ತಿ ಬರುತ್ತದೆ ಎಂದು ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ 3 ನೇ ಪ್ರತಿವಾದಿ ಪರ ವಕೀಲರು ಸಮಯವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ.